ಅಸಲು ದಾವಾ ನಂ.17/2021 ಪಿಡಬ್ಲೂ : 1

ದಿನಾಂಕಃ 28-06-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 2, 6 ಮತ್ತು 9 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ**

3. ದಾವಾ ಆಸ್ತಿಗಳು ಗೋಪಿ ಕುಟುಂಬದ ಆಸ್ತಿಗಳು ಎಂದರೆ ಸರಿ . ಸದರಿ ಗೋಪಿ ಕುಟುಂಬದಲ್ಲಿ ಆದಂತಹ ಪ್ರಕರಣದಲ್ಲಿ ದಾವಾ ಆಸ್ತಿಗಳು ನಮ್ಮ ಮೂಲ ಪುರುಷರಾದ ಜನಾರ್ದನ ಗೋಪಿಯವರಿಗೆ ಬಂದಿದೆ ಎಂದರೆ ಸರಿ . ಮೇಲೆ ಹೇಳಿದ ಜನಾರ್ದನ ಗೋಪಿರವರಿಗೆ ಮಾಣೇಶ್ವರ ಜನಾರ್ದನ ಗೋಪಿರವರು ಮಗ ಎಂದರೆ ಸರಿ . ಸದರಿ ಮಾಣೇಶ್ವರ ಗೋಪಿರವರಿಗೆ ಮೂರು ಜನ ಹೆಂಡತಿ ಎಂದರೆ ಸರಿ . ಸದರಿ ಮೂರು ಜನ ಹೆಂಡತಿಯರ ಹೆಸರು ಕಮಲಾ , ನಾಗವೇಣಿ ಹಾಗೂ ಭಾಗೀರಥಿ ಎಂದರೆ ಸರಿ . ವಿಶ್ವೇಶ್ವರ ಎಂಬವರು ಸದರಿ ಕಮಲಾರವರ ಮಗ ಎಂದರೆ ಸರಿ . ಸದರಿ ವಿಶ್ವೇಶ್ವರವರ ಹೆಂಡತಿ ಹೆಸರು ಶಾರದಾ ಎಂದರೆ ಸರಿ . ಸದರಿ ವಿಶ್ವೇಶ್ವರ ಹಾಗೂ ಶಾರದಾರವರಿಗೆ ಯಾವುದೇ ಸಂತತಿ ಇಲ್ಲ ಎಂದರೆ ಸರಿ . ಸದರಿ ನಾಗವೇಣಿಯವರು ಯಾವುದೇ ಸಂತತಿ ಇಲ್ಲದೇ ತೀರಿ ಹೋಗಿರುತ್ತಾರೆ ಎಂದರೆ ಸರಿ . ಮೇಲೆ ಹೇಳಿದ ಭಾಗಿರಥಿಗೆ 6 ಜನ ಮಕ್ಕಳು ಎಂದರೆ ಸರಿ . ಅವರ ಹೆಸರು ಸುಶೀಲಾ , ಲೀಲಾವತಿ , ಲಲಿತಾ , ದತ್ತಾತ್ರೇಯ ,ಇಂದುಮತಿ ಹಾಗೂ ಮಂದಾಕಿನಿ ಎಂದರೆ ಸರಿ . ಮೇಲೆ ಹೇಳಿದ ದತ್ತಾತ್ರೇಯ ನನ್ನ ತಂದೆ ಎಂದರೆ ಸರಿ . ನನ್ನ ತಂದೆ ತಾಯಿಯ ವಾರಸುದಾರರು ವಾದಿಯರು ಮತ್ತು ನಾನು ಎಂದರೆ ಸರಿ . ಮೇಲೆ ಹೇಳಿದ 5 ಜನ ಹೆಣ್ಣು ಮಕ್ಕಳಲ್ಲಿ ಇಂದುಮತಿ ಮತ್ತು ಮಂದಾಕಿನಿ ಜೀವಂತ ಇದ್ದಾರೆ ಎಂದರೆ ಸರಿ. ಮೇಲೆ ಹೇಳಿದ ಸುಶೀಲಾ, ಲೀಲಾವತಿ ಹಾಗೂ ಲಲಿತಾರವರಿಗೆ ಮಕ್ಕಳು ಇದ್ದಾರೆ ಎಂದರೆ ಸರಿ .

4. ದಾವಾ ಆಸ್ತಿಗಳನ್ನು ಬಿಟ್ಟು ಗೋಪಿ ಕುಟುಂಬದಿಂದ ನಮ್ಮ ಕುಟುಂಬಕ್ಕೆ ಬಹಳಷ್ಟು ಆಸ್ತಿಗಳು ಬಂದಿವೆ ಎಂದರೆ ಸರಿ . ಅದರಂತೆ ಗೋಕರ್ಣದ ರಥಬಸೀದಿಯಲ್ಲಿ ನಮಗೆ 5 ಅಂಗಡಿಗಳ ಇಮಾರತ್ತು ಇದೆ ಎಂರದೆ ಸರಿ . ಸದರಿ 5 ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ . ಸದರಿ 5 ಅಂಗಡಿಗಳ ಪೈಕಿ 4 ಅಂಗಡಿಗಳ ಬಾಡಿಗೆಯನ್ನು 1 ನೇ ವಾದಿ ತೆಗೆದುಕೊಳ್ಳುತ್ತಿದ್ದಾರೆ , ಇನ್ನೊಂದು ಅಂಗಡಿಯ ಬಾಡಿಗೆಯನ್ನು ನಾನು

ತೆಗೆದುಕೊಳ್ಳುತ್ತಿದ್ದೇನೆ . ಸದರಿ 5 ಅಂಗಡಿಗಳು ಯಾವುವು ಎಂದರೆ , ಮುದ್ರಣಾಲಯ , ಟೈಪಿಂಗ್ ಇನ್ ಸ್ಟಿಟ್ಯುಟ್ , ಗ್ರಂಥಾಲಯ, ಮೆಡಿಕಲ್ ಸ್ಟೋರ್ ಹಾಗೂ ಬೇಕರಿಯಾಗಿರುತ್ತದೆ . ನಾನು ಬಾಡಿಗೆ ತೆಗೆದುಕೊಳ್ಳುತ್ತಿರುವ ಅಂಗಡಿ ಬೇಕರಿಯಾಗಿರುತ್ತದೆ . ಮೇಲೆ ಹೇಳಿದ ಮೆಡಿಕಲ್ ಸ್ಟೋರನ್ನು 2 ನೇ ಪ್ರತಿವಾದಿ ನಡೆಸುತ್ತಿದ್ದಾರೆ . 2 ನೇ ಪ್ರತಿವಾದಿಯ ಸದರಿ ಮೆಡಿಕಲ್ ಸ್ಟೊರನ್ನು ಬಿ ಟ್ಟು ಕೊಟ್ಟು ಎರಡು ವರ್ಷವಾಯಿತು. ಮೇಲೆ ಹೇಳಿಚಿದ 5 ಅಂಗಡಿಗಳಿರುವ ಇಮಾರತ್ತನ್ನು ದಾವಾ ಪರಿಶಿಷ್ಟದಲ್ಲಿ ಸೇರಿಸಿಲ್ಲ ಎಂದರೆ ಸರಿ .ಧಾರೇಶ್ವರದಲ್ಲಿ ಮನೆ ಇದ್ದು ಸದರಿ ಮನೆಯನ್ನೂ ಸಹ ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

5. 1990 ರಲ್ಲಿ ನನ್ನ ತಂದೆ ತೀರಿ ಹೋಗಿರುತ್ತಾರೆ . ನನ್ನ ತಂದೆ ತೀರಿ ಹೋಗುವಾಗ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳು ನನ್ನ ತಂದೆಯ ಹೆಸರಿನಲ್ಲಿ ಇತ್ತು . 2002 ನೇ ಇಸವಿಯಲ್ಲಿ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ . ವಾದಿಯರು ಹಾಗೂ ನಮ್ಮ ತಾಯಿಯ ಒಪ್ಪಿಗೆಯ ಮೇರೆಗೆ ಆ ವೇಳೆಯಲಿ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳು ಅವಿಭಕ್ತ ಕುಟುಂಬ ಮ್ಯೆನೆಜರ್ ನಾತೆಯಿಂದ ನನ್ನ ಹೆಸರಿಗೆ ದಾಖಲಾಗಿರುತ್ತದೆ . ನಾನು ಅವಿಭಕ್ತ ಕುಟುಂಬ ಮ್ಯೆನೇಜರ್ ನಾತೆಯಿಂದ ದಾವಾ ಆಸ್ತಿಗಳನ್ನು ನೋಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿ . 1 ನೇ ವಾದಿ ಮತ್ತು 3 ನೇ ವಾದಿ ದ್ವಿತೀಯ ಪಿಯುಸಿ ಹಾಗೂ 2 ನೇ ವಾದಿ ಡಿಪ್ಲೋಮಾ ಕಲಿತಿರುತ್ತಾರೆ . 3 ನೇ ವಾದಿಯ ಮದುವೆಯನ್ನು ನಮ್ಮ ತಂದೆ ತೀರಿಹೋದ ನಂತರ ನಮ್ಮ ಅವಿಭಕ್ತ ಕುಟುಂಬದ ಎಲ್ಲರೂ ಸೇರಿಕೊಂಡು ಮಾಡಿರುತ್ತೇವೆ . ಈ ದಾವೆಯನ್ನು ಹಾಕುವವರೆಗೆ ನನ್ನ ಮತ್ತು ವಾದಿಯರ ಸಂಬಂಧ ಚೆನ್ನಾಗಿತ್ತು ಎಂದರೆ ಸರಿ . ಯಾವುದೇ ವ್ಯವಹಾರ ಮಾಡಬೇಕಾದರೂ ಸಹ ನಾನು ಹಾಗೂ ವಾದಿಯರು ಕೂಡಿ ಮಾತುಕತೆ ಮಾಡಿ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸರಿ .

6. 2 ನೇ ಪ್ರತಿವಾದಿಯು ನನ್ನ ತಾಯಿಯ ತಮ್ಮನ ಮಗ ಎಂದರೆ ಸರಿ . ನಮ್ಮ ಮತ್ತು ನನ್ನ ಸದರಿ ಮಾವನ ಕುಟುಂಬ ಅನ್ಯೋನ್ಯವಾಗಿ ಇತ್ತು ಎಂದರೆ ಸರಿ . ನಮ್ಮ ಕಷ್ಟ ಕಾಲದಲ್ಲಿ ನನ್ನ ಮಾವನ ಕುಟುಂಬದವರು ನಮಗೆ ಸಹಾಯ ಮಾಡಿರುತ್ತಾರೆ ಎಂದರೆ ಸರಿ . 2008 ನೇ ಇಸವಿಯಲ್ಲಿ ನನ್ನ ತಾಯಿಯ ಕಿಡ್ನಿ ವೈಫಲ್ಯವಾಗಿರುತ್ತದೆ. ಆ ವೇಳೆಯಲ್ಲೂ ಸಹ ನಮ್ಮ ಮಾವನವರ ಕುಟುಂಬದವರು ನಮಗೆ

ಸಹಾಯ ಮಾಡಿರುತ್ತಾರೆ ಎಂದರೆ ಸರಿ . ನಮ್ಮ ಯಾವುದೇ ದೇವತಾ ಕಾರ್ಯಕ್ರಮಗಳನ್ನು ನಮ್ಮ ಸದರಿ ಮಾವನ ಮನೆಯಲ್ಲಿ ಮಾಡುತ್ತೇವೆ ಎಂದರೆ ಸರಿ . 2014 ರಲ್ಲಿ ನನ್ನ ತಾಯಿ ತೀರಿಹೋಗಿರುತ್ತಾರೆ. ನನ್ನ ತಾಯಿ ತೀರಿಹೋದ ಸಂದರ್ಭದಲ್ಲಿ ನಮಗೆ ಹಣದ ಅವಶ್ಯಕತೆ ಬಹಳ ಇತ್ತು ಎಂದರೆ ಸರಿ . ದಾವಾ ಆಸ್ತಿಗಳು ಎಲ್ಲೆಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ . ವಾದಿಯರು ಯಾವತ್ತೂ ಸಹ ದಾವಾ ಆಸಿತಗಳನ್ನು ನೋಡಿಲ್ಲ ಎಂದರೆ ಸರಿ . ಸುಮಾರು 50 ರಿಂದ 60 ವರ್ಷಗಳಿಂದ ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳು ಮೀನುಗಾರರು ಹಾಗೂ ಸ್ಥಳೀಯ ಗೌಡರ ಕಬ್ಜೆಯಲ್ಲಿ ಇವೆ ಎಂದರೆ ಸರಿ . ಸದರಿ ಆಸ್ತಿಗಳಲ್ಲಿ ಮೇಲೆ ಹೇಳಿದ ವ್ಯಕ್ತಿಗಳು ಇಮಾರತ್ತುಗಳನ್ನು ಹಾಗೂ ರೆಸಾರ್ಟಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ . ಅದಕ್ಕಾಗಿ ನಾನು ಮತ್ತು ವಾದಿಯರು ಕುಳಿತುಕೊಂಡು , 2 ನೇ ಪ್ರತಿವಾದಿಯು ಮುಂದಾಗಿ ಸದರಿ ದಾವಾ ಅ ಮತ್ತು ಬ ಶೆಡ್ಯೂಲ್ ಆಸ್ತಿಗಳನ್ನು ಮೇಲೆ ಹೇಳಿದ ಕಬ್ಜಾದಲ್ಲಿ ಇರುವವರಿಗೆ ಕೊಡಬೇಕು ಎಂದು ತೀರ್ಮಾನ ಮಾಡಿಕೊಂಡಿರುತ್ತೇವೆ ಎಂದರೆ ಸರಿ . 3 ರಿಂದ 8, 10 ಮತ್ತು 11 ನೇ ಪ್ರತಿವಾದಿಯರಿಗೆ ಅ ಮತ್ತು ಬ ಪರಿಶಿಷ್ಟದ ಜಮೀನುಗಳನ್ನು ಸರ್ವೆ ಮಾಡಿಸಿ, ಕ್ರಯಕ್ಕೆ ಸಂಬಂಧಿಸಿ 11 ಇ ನಕಾಶೆಯನ್ನು ಮಾಡಿಸಿ ಅವರಿಗ ಮಾರಾಟ ಮಾಡಿರುತ್ತೇವೆ ಎಂದರೆ ಸರಿ . ಸದರಿ ಆಸ್ತಿಗಳನ್ನು ಮಾರಾಟ ಮಾಡಲು ನಾನು , ವಾದಿಯರು ಹಾಗೂ ನಮ್ಮ ತಾಯಿ 2 ನೇ ಪ್ರತಿವಾದಿಗೆ ಪವರ್ ಆಫ್ ಅರ್ಟರ್ನಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿ . ನಮಗೆ ಬಂದು ಹೋಗಲು ಆಗುವುದಿಲ್ಲ ಹಾಗೂ 2 ನೇ ಪ್ರತಿವಾದಿಯ ಮೇಲೆ ವಿಶ್ವಾಸ ಇದ್ದುದರಿಂದ ಸದರಿ ಆಸ್ತಿಯನ್ನು ಮಾರಾಟ ಮಾಡಲು 2 ನೇ ಪ್ರತಿವಾದಿಗೆ ನಾವು ಸದರಿ ಪವರ್ ಆಫ್ ಅಟರ್ನಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿ . ಸದರಿ ಪವರ್ ಆಫ್ ಅಟರ್ನಿಯನ್ನು ಕೊಡುವ ಮೊದಲು ನಾನು , ವಾದಿಯರು , ನಮ್ಮ ತಾಯಿ ಹಾಗೂ ನನ್ನ ಮೇಲೆ ಹೇಳಿದ ದೊಡ್ಡಮ್ಮನಾದ ಶಾರದಾ ಸೇರಿಕೊಂಡು ಮಾತುಕತೆ ಮಾಡಿರುತ್ತೇವೆ ಎಂದರೆ ಸರಿ . ಸದರಿ ಪವರ್ ಆಫ್ ಅಟರ್ನಿ ನಿಡಿ-1 ಮತ್ತು ನಿಡಿ-2 ಎಂದರೆ ಸರಿ . ನಿಡಿ-1 ರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ನಿಡಿ-1 ಕ್ಕೆ ನನ್ನ ತಾಯಿ ಹಾಗೂ ವಾದಿಯರು ಸಹ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ ಎಂದರೆ ಸರಿ . ನನ್ನ ತಾಯಿಗೆ ಡಯಾಲಿಸಿಸ್ ಮಾಡಲು ಹಣದ ಅವಶ್ಯಕತೆ ಇರುವುದರಿಂದ

ದಾವಾ ಅ ಮತ್ತು ಬ ಪರಿಶಿಷ್ಟ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ . ಸದರಿ ಮಾರಾಟದಿಂದ ಬಂದಂತಹ ಉಳಿದ ಹಣವನ್ನು ನಾನು , ವಾದಿಯರು ಹಾಗೂ ನನ್ನ ತಾಯಿ ಹಂಚಿಕೊಂಡಿರುತ್ತೇವೆ ಎಂದರೆ ಸರಿ .

7. ದಾವಾ ಅ ಮತು ಬಿ ಶೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡಿದಾಗಲೂ ಸಹ ನಾನು , ವಾದಿಯರು , ನನ್ನ ತಾಯಿ ಹಾಗೂ ನನ್ನ ದೊಡ್ಡಮ್ಮ ಮಾತುಕತೆ ಮಾಡಿಯೇ ಮಾರಾಟ ಮಡಿರುತ್ತೇವೆ ಎಂರದೆ ಸರಿ . ಸದರಿ ಆಸ್ತಿಗಳನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಮಾರಾಟ ಮಾಡಿದ ವಿಚಾರ ವಾದಿಯರಿಗ , ನನ್ನ ತಾಯಿಗೆ ಹಾಗೂ ನನ್ನ ಸದರಿ ದೊಡ್ಡಮ್ಮನಿಗೆ ಗೊತ್ತಿತ್ತು ಎಂದರೆ ಸರಿ . ಮೇಲೆ ಹೇಳಿದ ಪವರ್ ಆಪ್ ಅಟರ್ನಿಯಲ್ಲಿ ಯಾವುದೇ ಮೋಸ ಇಲ್ಲ ಎಂದರೆ ಸರಿ . ನಾವೆಲ್ಲರೂ ಸೇರಿ ಸದರಿ ಆಸ್ತಿಯನ್ನು ಮಾರಾಟ ಮಾಡಲು 2 ನೇ ಪ್ರತಿವಾದಿಗೆ ಅಧಿಕಾರ ನೀಡಿರುತ್ತೇವೆ ಎಂದರೆ ಸರಿ . ಆ ನಂತರದಲ್ಲಿ ಸದರಿ ಪವರ್ ಆಪ್ ಅಟರ್ನಿಯನ್ನು ರದ್ದು ಮಾಡಲು ಯಾರೂ ಸಹ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸರಿ . ಅದೇ ರೀತಿ 2002 ನೇ ಇಸವಿಯಲ್ಲಿ ನನ್ನನ್ನ ಅವಿಭಕ್ತ ಕುಟುಂಬದ ಮ್ಯಾನೇಜರ್ ಎಂದು ಮಾಡಿರುವುದನ್ನು ಕಡಿಮೆ ಮಾಡಲು ಯಾರುಾ ಸಹ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸರಿ . ಸದರಿ ಪವರ್ ಆಪ್ ಅಟರ್ನಿಗೆ ವಾದಿಯರು ಓದಿ ತಿಳಿದುಕೊಂಡು ನನ್ನ ತಾಯಿಯ ಮುಂದೆಯೇ ಸಹಿ ಮಾಡಿರುತ್ತಾರೆ ಎಂದರೆ ಸರಿ . ವಾದಿಯರ ಪಡಿತರ ಚೀಟಿ ಹಾಗೂ ಚುನಾವಣಾ ಗುರುತಿನ ಚೀಟಿ ಅವರ ದಾಂಡೇಲಿಯ ವಿಳಾಸದಲ್ಲಿ ಇದೆ ಎಂದರೆ ಸರಿ . ದಾವಾ ಅ ಮತ್ತು ಬ ಆಸ್ತಿಗಳನ್ನು ಮಾರಾಟ ಮಾಡಿರುವ ವಿಷಯ ವಾದಿಯರಿಗೆ 2012 ನೇ ಇಸವಿಯಲ್ಲಿಯೇ ಗೊತ್ತಿತ್ತು ಎಂದರೆ ಸರಿ .

8. ಈಗ್ಗೆ ಸುಮಾರು 4 ರಿಂದ 5 ವರ್ಷಗಳಿಂದ ಗೋಕರ್ಣದಲ್ಲಿ ಪ್ರವಾಸೋಧ್ಯಮ ಅಭಿವೃದ್ಧಿಯಾಗಿರುವುದರಿಂದ ಜಮೀನುಗಳ ಏರಿಕೆ ಆಗಿರುವುದನ್ನು ಬಿಟ್ಟು ಅದಕ್ಕಿಂತ ಮೊದಲು ಜಮೀನುಗಳಿಗೆ ಅಷ್ಟೊಂದು ಬೆಲೆ ಇರಲಿಲ್ಲ ಎಂದರೆ ಸರಿ . ದಾಂಡೇಲಿ ಆಸ್ತಿ ಬಿಟ್ಟು ಬಾಕಿ ಯಾವುದೇ

ದಾವಾ ಆಸ್ತಿಗಳು ನಮ್ಮ ಕಬ್ಜಾದಲ್ಲಿ ಇರಲಿಲ್ಲ ಹಾಗೂ ಅದನ್ನು ಬಿಡಿಸಲು ಸಹ ನಮಗೆ ಸಾಧ್ಯವಿಲ್ಲ ಎಂದರೆ ಸರಿ .

11 ನೇ ಪ್ರತಿವಾದಿಯ ವಕೀಲರು 2, 6 ಮತ್ತು 9 ನೇ ಪ್ರತಿವಾದಿಯರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು , ಅನುಮತಿ ನೀಡಲಾಯಿತು.

8 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಅವರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

3 ರಿಂದ 5, 7 ಮತ್ತು 10 ನೇ ಪ್ರತಿವಾದಿಯರು ಏಕಪಕ್ಷೀಯರಾಗಿರುತ್ತಾರೆ .

ಪಾಟೀ ಸವಾಲು ವಾದಿಯರ ಪರವಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.